RNU AIR DHARWAD

# MAY 19, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಎಸ್.ಎಸ್.ಎಲ್.ಸಿ. ಕೃಪಾಂಕ ನೀಡಿಕೆ; ಮುಂದಿನ ಶೈಕ್ಷಣಿಕ ವರ್ಷಕ್ಕೆ ಮರು ಪರಿಶೀಲನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಪ್ರಸಕ್ತ 10ನೇ ತರಗತಿ ಪರೀಕ್ಷೆಯ, ಪಾವಿತ್ರ್ಯತೆ ಕಾಪಾಡಲು, ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿಕೆ – ಸಚಿವ ಮಧು ಬಂಗಾರಪ್ಪ.**
- **ಅತೀಯಾದ ತಾಪಮಾನ; ಹಾವೇರಿ ಜಿಲ್ಲೆ ಅಡಕೆ ತೋಟಗಳಿಗೆ ಕೀಟ ಬಾಧೆ.**
- **'ನ್ಯಾನೋ ತಂತ್ರಜ್ಞಾನ' ಕೃಷಿಯಲ್ಲೂ ಬಳಕೆ – ಶಿವಕುಮಾರ ಸಿಂಗ್.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಪ್ರಸಕ್ತ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ, ವಿದ್ಯಾರ್ಥಿಗಳಿಗೆ ಶೇಕಡ 20 ಕೃಪಾಂಕ ನೀಡಲಾಗಿದ್ದು, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಕೃಪಾಂಕಗಳನ್ನು ನೀಡುವ ಕುರಿತು ಪರಿಶೀಲಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಶಿಕ್ಷಣ ಇಲಾಖೆ ಉನ್ನತಾಧಿಕಾರಿಗಳಿಗೆ ಸೂಚಿಸಿದ್ದಾರೆ.**

<><><>

**ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ, ಚಿಕ್ಕಮಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪರೀಕ್ಷೆಯ ಪಾವಿತ್ರ್ಯತೆ ಮತ್ತು ಶಿಸ್ತು ಕಾಪಾಡಲು, ಪ್ರಸಕ್ತ ಶೈಕ್ಷಣಿಕ ವರ್ಷದ, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ, ಶೇಕಡ 20 ರಷ್ಟು ಕೃಪಾಂಕ, ಗ್ರೇಸ್ ಮಾರ್ಕ್ಸ್ ನೀಡಲಾಗಿದೆ. ಕೃಪಾಂಕ ನೀಡಿಕೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಅನ್ವಯಿಸದು ಎಂದು, ಸ್ಪಷ್ಟ ಪಡಿಸಿದ್ದಾರೆ.**

ಹೆಚ್ಚುವರಿ ಕೃಪಾಂಕ ನೀಡಿದ್ದರಿಂದ ಉತ್ತಮ ಫಲಿತಾಂಶ ಬಂದಿದೆ. ಮಕ್ಕಳ ಸಾಮರ್ಥ್ಯ ತಿಳಿಯಲು ಸಹಾಯವಾಗಿದೆ. ಮೊದಲ ಬಾರಿಗೆ ಈ ಪ್ರಯೋಗ ಮಾಡಲಾಗಿದೆ ಎಂದರು.

<><><>

ನೈಋತ್ಯ ಪದವೀಧರ ಹಾಗೂ ಶಿಕ್ಷಕರ ಮತ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು, ಡಾಕ್ಟರ್ ಕೆ.ಕೆ ಮಂಜುನಾಥ್ ಮತ್ತು ಆಯನೂರು ಮಂಜುನಾಥ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿದ್ದಾರೆ. ನ್ಯಾಯ ಸಮ್ಮತ ಮತ್ತು ಉತ್ತಮ ಆಡಳಿತಕ್ಕಾಗಿ, ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸುವ ವಿಶ್ವಾಸವಿದೆ ಎಂದು, ಮಧು ಬಂಗಾರಪ್ಪ ಹೇಳಿದರು.

<><><>

ಈಶಾನ್ಯ ಕರ್ನಾಟಕ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆ, ಶನಿವಾರ ಕಲಬುರಗಿ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ, ಏಳು ಜಿಲ್ಲೆಗಳ ಆಚಾರ್ಯ ತರಬೇತುದಾರರಿಗೆ, ಕಾರ್ಯಾಗಾರ ಜರುಗಿತು. ಅಪರ ಪ್ರಾದೇಶಿಕ ಆಯುಕ್ತ ಇಲಿಯಾಸ್ ಅಹಮದ್ ಇಸಾಮದಿ, ಚುನಾವಣಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ ನೇತೃತ್ವದಲ್ಲಿ, ಭಾರತ ಚುನಾವಣಾ ಆಯೋಗದ ರಾಷ್ಟ್ರ ಮಟ್ಟದ ಆಚಾರ್ಯ ತರಬೇತುದಾರ, ಡಾಕ್ಟರ್ ಶಶಿಶೇಖರ ರೆಡ್ಡಿ ಅವರು, ಮತದಾನ ಪ್ರಕ್ರಿಯೆ, ಪೋಸ್ಟಲ್ ಬ್ಯಾಲೆಟ್ ನಿರ್ವಹಣೆ ಕುರಿತು, ತರಬೇತಿ ನೀಡಿದರು. ಪ್ರದೇಶ ಸಮಾಚಾರಕ್ಕಾಗಿ, ಡಾಕ್ಟರ್ ಶಶಿಶೇಖರ ರೆಡ್ಡಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ. ಕಳೆದ ಬಾರಿ ಸಾವಿರಾರು ಮತಗಳು ಕುಲಗೆಟ್ಟಿದ್ದವು ಎಂದು ಅವರು ತಿಳಿಸಿದ್ದಾರೆ.

<><><>

ಡಾ. ಶಶಿಶೇಖರ್ ರೆಡ್ಡಿ ಧ್ವನಿ 50 ಸೆಕೆಂದುಗಳು

<><><>

ಹೆಸರಾಂತ ಸಾಹಿತಿ, ದಿವಂಗತ ಶಿವರಾಮ ಕಾರಂತರ ಹೆಸರಿನಲ್ಲಿ ಮೂಡುಬಿದಿರೆಯ ಶಿವರಾಮ ಕಾರಂತ ಪ್ರತಿಷ್ಠಾನ ನೀಡುವ, ಶಿವರಾಮ ಕಾರಂತ ಪ್ರಶಸ್ತಿಗೆ ಮೂವರು ಸಾಧಕ ಗಣ್ಯರು ಹಾಗೂ ಹೆಗ್ಗೋಡಿನ ಕೆ.ವಿ. ಅಕ್ಷರ ನೇತೃತ್ವದ ನೀನಾಸಂ ಸಂಸ್ಥೆ ಭಾಜನವಾಗಿದೆ. ಬೆಂಗಳೂರಿನ ಮೂಡ್ನಾಕೂಡು ಚಿನ್ನಸ್ವಾಮಿ, ಮೈಸೂರಿನ ಪ್ರೊಫೆಸರ್ ಕೃಷ್ಣಮೂರ್ತಿ ಹನೂರು, ಉಡುಪಿಯ ಕೆ.ಪಿ. ರಾವ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು, ಪ್ರತಿಷ್ಠಾನದ ಅಧ್ಯಕ್ಷೆ ಜಯಶ್ರೀ ಅಮರನಾಥ ಶೆಟ್ಟಿ ತಿಳಿಸಿದ್ದಾರೆ.

<><><>

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಹಾದಿ ಬೀದಿಯಲ್ಲಿ ಹತ್ಯೆಗಳಾಗುತ್ತಿವೆ. ಬೆಂಗಳೂರು ನಗರದಲ್ಲಿ ಮಾದಕ ವಸ್ತುಗಳ ದಂಧೆ ಅವ್ಯಾಹತವಾಗಿದೆ. ಕಳೆದ ನಾಲ್ಕು ತಿಂಗಳಲ್ಲಿ ರಾಜ್ಯಾದ್ಯಂತ, 430 ಹತ್ಯೆಗಳು ಮತ್ತು 198 ಅತ್ಯಾಚಾರ ಪ್ರಕರಣಗಳು ವರದಿಯಾಗಿವೆ ಎಂದು, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಜೆ.ಡಿ.ಎಸ್., ಕಳವಳ ವ್ಯಕ್ತ ಪಡಿಸಿದೆ.

<><><>

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದ್ದು, ಅಪರಾಧ ಪ್ರಮಾಣ ಹೆಚ್ಚಳವಾಗಿವೆ. ಕೂಡಲೇ ಕ್ರಮವಹಿಸುವಂತೆ ಆಗ್ರಹಿಸಿ, ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ, ಬಿಜೆಪಿ ನಿಯೋಗ ಬೆಂಗಳೂರಿನಲ್ಲಿ ದೂರು ಸಲ್ಲಿಸಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬೇಸಿಗೆಯಲ್ಲಿ ಅಡಕೆ ಗಿಡಕ್ಕೆ ಬಾಧಿಸುವ ಕೀಟಗಳು, ಈ ವರ್ಷ ಅತೀಯಾದ ತಾಪಮಾನ ಮತ್ತು ಕಡಿಮೆ ಆರ್ದ್ರತೆಯಿಂದ, ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ತೋಟಗಳಿಗೆ, ಮಾರಕವಾಗಿ ವ್ಯಾಪಿಸುತ್ತಿವೆ. ಹಾನಗಲ್ ತಾಲೂಕಿನ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ ಬಣಕಾರ ಮಾಹಿತಿ ನೀಡಿ, ಅಡಕೆ ಬೆಳೆಗೆ ಬಾಧಿಸುವ ನುಸಿ ಕಾಟವನ್ನು ತಪ್ಪಿಸಲು, ಮುಂಜಾಗ್ರತಾ ಕ್ರಮವಾಗಿ, ತೋಟದಲ್ಲಿ ತೇವಾಂಶ ವಾತಾವರಣ ಸೃಷ್ಟಿಸಲು, ತುಂತುರು ಅಥವಾ ಹನಿ ನೀರಾವರಿ ವ್ಯವಸ್ಥೆ ಹೆಚ್ಚಿಸಬೇಕು. ಈಗಾಗಲೇ ಕೀಟ ಬಾಧೆಗೆ ಒಳಪಟ್ಟ ಗಿಡಗಳಿಗೆ, ರಾಸಾಯನಿಕ ಸಿಂಪಡಣೆಯಿಂದ ಹತೋಟಿಗೆ ತರಬಹುದು, ಎಂದರು.

<><><>

'ನ್ಯಾನೋ ತಂತ್ರಜ್ಞಾನ' ಇಂದು ಪ್ರಚಲಿತವಿದ್ದು, ಈ ತಾಂತ್ರಿಕತೆಯನ್ನು ಕೃಷಿಯಲ್ಲೂ ಬಳಸಲಾಗುತ್ತಿದೆ. ನ್ಯಾನೋ ತಂತ್ರಜ್ಞಾನ ಸಸ್ಯಗಳಲ್ಲಿ ರೋಗ ಪತ್ತೆ, ಚಿಕಿತ್ಸೆ ಸೇರಿದಂತೆ, ತ್ಯಾಜ್ಯ ನೀರಿನ ಪರೀಕ್ಷೆ, ಸಸ್ಯಗಳಲ್ಲಿ ಪೋಷಕಾಂಶ ಹೀರುವ ಶಕ್ತಿಯ ವರ್ಧನೆಗೆ ಪೂರಕ ಎಂದು, ತೆಲಂಗಾಣ ರಾಜ್ಯದ, ಮೆಹಬೂಬ್ ನಗರ ಜಿಲ್ಲೆಯ, ಪಲಮೂರು ವಿಶ್ವವಿದ್ಯಾಲಯದ, ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾಕ್ಟರ್ ಶಿವಕುಮಾರ ಸಿಂಗ್ ಹೇಳಿದರು. ರಾಯಚೂರು ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ, 'ನ್ಯಾನೋ ತಂತ್ರಜ್ಞಾನ ಮತ್ತು ಅದರ ಅನ್ವಯಿಕೆಗಳು; ಸಂಶೋಧನೆ ಮತ್ತು ಪ್ರಕಟಣೆಗಳು' ವಿಷಯ ಕುರಿತ, ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ, ಅವರು ಪಾಲ್ಗೊಂಡು ಮಾತನಾಡಿದರು.

ನ್ಯಾನೋ ತಂತ್ರಜ್ಞಾನವನ್ನು ಪರಿಸರ ಸ್ನೇಹಿ ತಂತ್ರಜ್ಞಾನ ಎಂದು ಗುರುತಿಸಿದ್ದಾರೆ. ಸಸ್ಯ ಮತ್ತು ಪ್ರಾಣಿತಳಿ ಶಾಸ್ತ್ರ, ಆನುವಂಶಿಕ ತಾಂತ್ರಿಕತೆ ಮತ್ತು ಜೀವರಾಸಾಯನಿಕ ನಿರೋಧಕದಲ್ಲಿ ಬಳಸಲಾಗುತ್ತಿದೆ ಎಂದರು.

<><><>

ವಿಜಯಪುರ ಜಿಲ್ಲೆ, ಬಬಲೇಶ್ವರ ತಾಲೂಕು, ಬಬಲೇಶ್ವರದ ಲಕ್ಷ್ಮೀ ಮತ್ತು ಬಸಗೊಂಡ ಶಿರಮಗೊಂಡ ದಂಪತಿ, ತಮ್ಮ ಮೂರು ಎಕರೆ ಜಮೀನಿನಲ್ಲಿ, 7 ದೇಸಿ ಹಸುಗಳನ್ನು ಸಾಕಿಕೊಂಡು, 15ಕ್ಕೂ ಹೆಚ್ಚು ಆರೋಗ್ಯ ವರ್ಧಕ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಕೊಲ್ಹಾಪುರದ ಕನ್ಹೇರಿ ಮಠದ ಸ್ವಾಮೀಜಿ ಮಾರ್ಗದರ್ಶನದಲ್ಲಿ, ಸಾವಯವ, ಪರಿಸರ ಸ್ನೇಹಿ ಮಾದರಿ ಕೃಷಿಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಬಸಗೊಂಡ ಅವರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ರೈತ ಬಸಗೊಂಡ ಧ್ವನಿ 35 ಸೆಕೆಂದುಗಳು

<><><>

ನಿಧನ ವಾರ್ತೆ

<><><>

ಹೆಸರಾಂತ ಸಂಘಟಕ, ಸಂಗೀತ ಪ್ರೇಮಿ, ಧಾರವಾಡದ ಅನಂತ ಹರಿಹರ ಅವರು, ಶನಿವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ, ಅಲ್ಪ ಕಾಲಿಕ ಅಸೌಖ್ಯದಿಂದ ಬಳಲಿ, ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಪಂಡಿತ ಎಂ. ವೆಂಕಟೇಶ ಕುಮಾರ, ಪಂಡಿತ ಬಿ.ಎಸ್. ಮಠ ಸೇರಿದಂತೆ, ಸಂಗೀತ ಲೋಕದ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲೆ, ಮೂಲ್ಕಿ ಮೂಲದ, ಖ್ಯಾತ ಉದ್ಯಮಿ ರಘುನಂದನ ಕಾಮತ್ ಮುಂಬೈನಲ್ಲಿ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ನ್ಯಾಚುರಲ್ ಐಸ್‌ಕ್ರೀಂ ಸಂಸ್ಥಾಪಕರಾಗಿ ಅವರು ಪ್ರಸಿದ್ಧಿ ಪಡೆದಿದ್ದರು.

<><><>

ಶನಿವಾರ ರಾಜ್ಯದಲ್ಲಿ ನಡೆದ ಮೂರು ಪ್ರತ್ಯೇಕ ಅವಘಡಗಳಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ.

<><><>

ಗದಗ ಜಿಲ್ಲೆ, ರೋಣದಲ್ಲಿ ರಥದಡಿ ಸಿಲುಕಿ ಇಬ್ಬರು ಮೃತಪಟ್ಟಿದ್ದಾರೆ.

<><><>

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ, ಕಾಗಲ್ ತಾಲೂಕಿನ ಬಸ್ತವಾಡೆ ಬಳಿ ವೇದಗಂಗಾ ನದಿಯಲ್ಲಿ ಮುಳುಗಿ, ಬೆಳಗಾವಿ ಜಿಲ್ಲೆ ಅಥಣಿ ಮೂಲದ ನಾಲ್ವರು ಮೃತಪಟ್ಟಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು, ಬನವಾಸಿಯಲ್ಲಿ 17 ವರ್ಷದ ಓರ್ವ ಬಾಲಕ ಸಿಡಿಲಿಗೆ ಬಲಿಯಾಗಿದ್ದಾನೆ.

<><><>

ಧಾರವಾಡ ಜಿಲ್ಲೆ, ಅಳ್ನಾವರ ತಾಲೂಕು, ಹೂಲಿಕೆರೆ ಬಳಿ ಸಿಡಿಲು ಬಡಿದು, 55 ವರ್ಷ ವಯಸ್ಸಿನ ವ್ಯಕ್ತಿ ಮೃತ ಪಟ್ಟಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲಾ ಚೆಸ್ ಸಂಸ್ಥೆ, ಮಂಗಳೂರಿನ ಟೌನ್ ಹಾಲ್‌ನಲ್ಲಿ ಆಯೋಜಿಸಿದ, ಚದುರಂಗ ಪಂದ್ಯಾವಳಿಯಲ್ಲಿ, ಮಂಗಳೂರಿನ ಪ್ರತಿಭೆ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವಾ, ಫಿಡೆ ರೇಟೆಡ್ ಚೆಸ್ ಟೂರ್ನಿಯಲ್ಲಿ, 17 ವರ್ಷದ ಬಾಲಕಿಯರ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕರ್ನಾಟಕ ಸೇರಿದಂತೆ, ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಕರಾವಳಿ ಪ್ರದೇಶದಲ್ಲಿ, ನಾಳೆ ಮತ್ತು ನಾಡಿದ್ದು, ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು, ಭಾರತೀಯ ಹವಾಮಾನ ಇಲಾಖೆ, ಮುನ್ಸೂಚನೆ ನೀಡಿದೆ.

<><><>

ತುಮಕೂರು ಜಿಲ್ಲೆ, ಗುಬ್ಬಿಯಲ್ಲಿ 11 ಸೆಂಟಿ ಮೀಟರ್ ಮಳೆಯಾಗಿದೆ. ಚಾಮರಾಜನಗರ ಜಿಲ್ಲೆಯ ಬೇಗೂರಿನಲ್ಲಿ 9 ಹಾಗೂ ಶ್ರವಣ ಬೆಳಗೊಳ ಮತ್ತು ಚನ್ನರಾಯಪಟ್ಟಣದಲ್ಲಿ ತಲಾ 7 ಸೆಂಟಿ ಮೀಟರ್ ಮಳೆಯಾಗಿದೆ.

<><><>

ಕೋಲಾರದಲ್ಲಿ ತಾಪಮಾನ 40 ಡಿಗ್ರಿ ಸೆಲ್ಸಿಯೆಸ್, ದಾಖಲೆ ಪ್ರಮಾಣದ ಏರಿಕೆ ಕಂಡಿದೆ.

<><><>

ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದ, ಉಪಾಹಾರ ಗೃಹಕ್ಕೆ, ದೂರಿನನ್ವಯ ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

<><><>

ಸಕಲೇಶಪುರ ರೈಲು ನಿಲ್ದಾಣದಲ್ಲಿ, ಸಂಭವನೀಯ ರೈಲು ದುರಂತ ಹಾಗೂ ನಂತರದ ಪರಿಹಾರ ಕಾರ್ಯಾಚರಣೆ ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ಅಣಕು ಪ್ರದರ್ಶನ ಜರುಗಿತು.

<><><>

ಚಿತ್ರದುರ್ಗ ಜಿಲ್ಲೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ, ಬುಧವಾರ 22ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3ರ ವರೆಗೆ, ಉದ್ಯೋಗಾಕಾಂಕ್ಷಿಗಳ ನೇರ ಸಂದರ್ಶನ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಎಸ್.ಎಸ್.ಎಲ್.ಸಿ. ಕೃಪಾಂಕ ನೀಡಿಕೆ; ಮುಂದಿನ ಶೈಕ್ಷಣಿಕ ವರ್ಷಕ್ಕೆ ಮರು ಪರಿಶೀಲನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಪ್ರಸಕ್ತ 10ನೇ ತರಗತಿ ಪರೀಕ್ಷೆಯ, ಪಾವಿತ್ರ್ಯತೆ ಕಾಪಾಡಲು, ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿಕೆ – ಸಚಿವ ಮಧು ಬಂಗಾರಪ್ಪ.
- ಅತೀಯಾದ ತಾಪಮಾನ; ಹಾವೇರಿ ಜಿಲ್ಲೆ ಅಡಕೆ ತೋಟಗಳಿಗೆ ಕೀಟ ಬಾಧೆ.
- ‘ನ್ಯಾನೋ ತಂತ್ರಜ್ಞಾನ’ ಕೃಷಿಯಲ್ಲೂ ಬಳಕೆ – ಶಿವಕುಮಾರ ಸಿಂಗ್.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ